**MVC 484/21** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ VAB, ವಕೀಲರಿಂದಃ**

2. ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ಏಶಿಯನ್ ಪೇಂಟ ಕಂಪನಿಯಲ್ಲಿ ಡಿಸ್‌ಪ್ಯಾಚ್ ಸುಪರವೈಜರ ಆಗಿ ಮೊದಲು ಕೆಲಸ ಮಾಡುತ್ತಿದ್ದೆನು. ನಮ್ಮ ವಕೀಲರಿಗೆ ಕೇಸ್ ಹಾಕುವದಕ್ಕಿಂತ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದೇನೆ. ಎಲ್ಲಾ ದಾಖಲಾತಿಗಳು ಸರಿಯಾಗಿವೆ. ನಾನು ಎರಡನೇ ಎದುರುದಾರರ ಕಂಪನಿಯೂ ಸಲ್ಲಿಸಿದ ತಕರಾರಿನ ಬಗ್ಗೆ ದಾಖಲೆ ಹಾಜರಪಡಿಸುತ್ತೇನೆ. ನಾವು ಹೇಳುವ ಅಪಘಾತಪಡಿಸಿದ ವಾಹನ ರಿಲೈನ್ಸ ಜನರಲ್ ಇನ್ಸುರೆನ್ಸ ಕಂಪನಿಯಲ್ಲಿ ವಿಮೆಯಾಗಿದೆ ಎಂದು ಎರಡನೇ ಎದುರುದಾರರು ಮಾಹಿತಿ ನೀಡುತ್ತಾರೆ ಅಂದರೆ ಸರಿಯಲ್ಲ. ಎರಡನೇ ಎದುರುದಾರ ಕಂಪನಿಗೆ ವಿಮೆ ಪಾಲಿಸಿ ಆಗಿಲ್ಲ ಅಂದರೆ ಸರಿಯಲ್ಲ. ಲಾರಿ ಕಂಟೇನರ ನಮಗೆ ಅಪಘಾತಪಡಿಸಿದೆ. ಅದು 6 ಚಕ್ರದ ವಾಹನ ಇರುತ್ತದೆ. ಅಂತಿಮ ವರದಿಯಲ್ಲಿ ಏನು ಬರೆಯಲಾಗಿದೆ ಎಂದು ಮಾಹಿತಿ ಇದೆ. ವಾಹನ 15 ವರ್ಷಗಳು ಮೀರಿದೆ ಹಾಗೂ ರಿನಿವಲ್ ಆಗಿಲ್ಲವೆಂದು ನಮೂದು ಇದೆ ಅಂದರೆ ಸರಿ. ವಾಹನ ಚಾಲಕನಿಗೆ ಡಿ ಎಲ್ ಇರಲಿಲ್ಲ ಅಂದರೆ ಸರಿಯಲ್ಲ. ಎರಡನೇ ಎದುರುದಾರ ಕಂಪನಿಗೆ ಆ ವಾಹನದ ವಿಮೆ ಪಾಲಿಸಿ ಆಗಿಲ್ಲ ಅಂದರೆ ಸರಿಯಲ್ಲ. ಮೂಲ ವಿಮೆ ಪಾಲಿಸಿ ಹಾಜರಪಡಿಸಲು ಆಗುವುದಿಲ್ಲ. ಡಿ ಎಲ್ ಕೂಡಾ ಹಾಜರಪಡಿಸಲು ಆಗುವುದಿಲ್ಲ. ನನ್ನ ವಯಸ್ಸು 32 ವರ್ಷ. 25 ಸಾವಿರ ರೂ. ಮಾಸಿಕ ಆದಾಯದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಸ್ವಯಂ ಉದ್ಯೋಗ ಮಾಡುವ ಬಗ್ಗೆ ಜಿಲ್ಲಾ ಕೈಗಾರಿಕಾ ಸಂಸ್ಥೆಯಿಂದ ಅಧಿಕೃತ ದಾಖಲೆ ಹಾಜರಪಡಿಸುತ್ತೇನೆ. ಬೇಕೆಂತಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಮದುವೆಯಾಗಿದ್ದೇನೆ. ನಾನು ಮೊದಲು ಹೇಗೆ ಇದ್ದೆನೋ ಹಾಗೆ ಇದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ನೋವು ಇಲ್ಲ ಅಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ನಿರುದ್ಯೋಗ ಅಂದರೆ ಸರಿಯಲ್ಲ.

**MVC 484/21** **PW : 1**

ನಾನು ಸೃಷ್ಟಿ ಮಾಡಿ ದಾಖಲೆ ಹಾಜರಪಡಿಸಿರುವುದರಿಂದ ಪರಿಹಾರ ಪಡೆಯಲು ಬಾಧ್ಯಸ್ಥನು ಇರುವುದಿಲ್ಲ ಅಂದರೆ ಸರಿಯಲ್ಲ. ದುರುದ್ದೇಶದಿಂದ ಪರಿಹಾರಗೋಸ್ಕರ ಎರಡನೇ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**MVC 484/21 PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ V A B, ವಕೀಲರಿಂದಃ**

3. ನಾನು ಅಮರಗೋಳದಲ್ಲಿದ್ದೇನೆ. ನಾನು 12 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ವಯಸ್ಸು 27 ವರ್ಷ. ನಾನು ನಮ್ಮ ಚಿಕ್ಕಪ್ಪರವರ ಇರುತ್ತೇನೆ. ನನ್ನ ಗಂಡ ಕಂಪ್ಯೂಟರ ಕೆಲಸ ಮಾಡುತ್ತಿದ್ದರು. ಸ್ವಂತ ಕಂಪ್ಯೂಟರ ಸಂಸ್ಥೆ ನಡೆಸುತ್ತಿದ್ದರು. ಪರವಾನಿಗೆ ಹಾಗೂ ಸಂಸ್ಥೆ ನಡೆಸಲು ತೆಗೆದುಕೊಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ. ಆದಾಯ ತೆರಿಗೆ ಕಟ್ಟಿದ ಬಗ್ಗೆ ಗೊತ್ತಿಲ್ಲ. ನನ್ನ ಗಂಡ ಏನು ಕೆಲಸ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತದಲ್ಲಿ ಏನೂ ಆಗಿಲ್ಲ ಅಂದರೆ ಸರಿಯಲ್ಲ.

ನಮ್ಮ ವಕೀಲರಿಗೆ ಕೇಸ್ ಹಾಕುವದಕ್ಕಿಂತ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದೇನೆ. ಎಲ್ಲಾ ದಾಖಲಾತಿಗಳು ಸರಿಯಾಗಿವೆ. ನಾನು ಎರಡನೇ ಎದುರುದಾರರ ಕಂಪನಿಯೂ ಸಲ್ಲಿಸಿದ ತಕರಾರಿನ ಬಗ್ಗೆ ದಾಖಲೆ ಹಾಜರಪಡಿಸುತ್ತೇನೆ. ನಾವು ಹೇಳುವ ಅಪಘಾತಪಡಿಸಿದ ವಾಹನ ರಿಲೈನ್ಸ ಜನರಲ್ ಇನ್ಸುರೆನ್ಸ ಕಂಪನಿಯಲ್ಲಿ ವಿಮೆಯಾಗಿದೆ ಎಂದು ಎರಡನೇ ಎದುರುದಾರರು ಮಾಹಿತಿ ನೀಡುತ್ತಾರೆ ಅಂದರೆ ಸರಿಯಲ್ಲ. ಎರಡನೇ ಎದುರುದಾರ ಕಂಪನಿಗೆ ವಿಮೆ ಪಾಲಿಸಿ ಆಗಿಲ್ಲ ಅಂದರೆ ಸರಿಯಲ್ಲ. ಲಾರಿ ಕಂಟೇನರ ನನ್ನ ಗಂಡನಿಗೆ ಅಪಘಾತಪಡಿಸಿದೆ. ಅದು 6 ಚಕ್ರದ ವಾಹನ ಇರುತ್ತದೆ. ಅಂತಿಮ ವರದಿಯಲ್ಲಿ ಏನು ಬರೆಯಲಾಗಿದೆ ಎಂದು ಮಾಹಿತಿ ಇದೆ. ವಾಹನ 15 ವರ್ಷಗಳು ಮೀರಿದೆ ಹಾಗೂ ರಿನಿವಲ್ ಆಗಿಲ್ಲವೆಂದು ನಮೂದು ಇದೆ ಅಂದರೆ ಸರಿ. ವಾಹನ ಚಾಲಕನಿಗೆ ಡಿ ಎಲ್ ಇರಲಿಲ್ಲ ಅಂದರೆ ಸರಿಯಲ್ಲ. ಎರಡನೇ ಎದುರುದಾರ ಕಂಪನಿಗೆ ಆ ವಾಹನದ ವಿಮೆ ಪಾಲಿಸಿ ಆಗಿಲ್ಲ ಅಂದರೆ ಸರಿಯಲ್ಲ. ಮೂಲ ವಿಮೆ ಪಾಲಿಸಿ ಹಾಜರಪಡಿಸಲು ಆಗುವುದಿಲ್ಲ. ಡಿ ಎಲ್ ಕೂಡಾ ಹಾಜರಪಡಿಸಲು ಆಗುವುದಿಲ್ಲ. ನನ್ನ ಗಂಡನಿಗೆ 32 ವರ್ಷ. ನನ್ನ ಗಂಡನಿಗೆ ವಾರ್ಷಿಕ 4 ಲಕ್ಷ 50 ಸಾವಿರ ರೂ. ಗಳು ಆದಾಯದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ.

**MVC 484/21 PW : 2**

ನನ್ನ ಗಂಡ ನಿರುದ್ಯೋಗಿ ಅಂದರೆ ಸರಿಯಲ್ಲ. ನಾನು ಸೃಷ್ಟಿ ಮಾಡಿ ದಾಖಲೆ ಹಾಜರಪಡಿಸಿರುವುದರಿಂದ ಪರಿಹಾರ ಪಡೆಯಲು ಬಾಧ್ಯಸ್ಥಳು ಇರುವುದಿಲ್ಲ ಅಂದರೆ ಸರಿಯಲ್ಲ. ದುರುದ್ದೇಶದಿಂದ ಪರಿಹಾರಗೋಸ್ಕರ ಎರಡನೇ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.